



ಸಾಲಿನಲ್ಲಿ ಸ್ವೆಟರ್, ಕೋಟು, ಸಾಕ್ಸ್, ಜಾಕೆಟ್, ಸ್ಕರ್ಟ್, ಟೋಪಿಗಳೂ ಸಿಗುತ್ತಿವೆ. ಪುಟಾಣಿಗಳ ಉಡುಗೆಯಂತೂ ಇನ್ನೂ ಆಕರ್ಷಕ. ಕಡುಗೆಂಪು ಬಣ್ಣದ ವೆಲ್ವೆಟ್ ಫ್ರಾಕ್, ಇದರ ಮೇಲೆ ನವಿಲುಗರಿಯಷ್ಟೇ ನುಣುಪಾದ ಕೆಂಪು ಬಣ್ಣದ ಚಮ್ಕಿಗಳು, ಸಾಕ್ಸ್, ಕೋಟು, ಟೋಪಿ ಎಲ್ಲವೂ ಕೆಂಪುಮಯ. ಸಾಂತಾನ ತದ್ರೂಪ ಎಂದರೆ ಇದೇ ಅಲ್ಲವೇ?

## ಉಡುಪಿಗೆ ತಕ್ಕ ಒಡವೆ

ಕ್ರಿಸ್‌ಮಸ್ ಸಂಭ್ರಮಿಸಲು ಬರೀ ಉಡುಪು ಸಾಕೆ? ಇದಕ್ಕೊಪ್ಪುವ ಒಡವೆ ಬೇಡವೇ? ಕ್ರಿಸ್‌ಮಸ್ ಟ್ರೀ ಅನ್ನು ಹೋಲುವ ಜುಮುಕಿ, ಸ್ಟಡ್, ಪೆಂಡೆಂಟ್ ಸೆಟ್, ಕ್ಲಿಪ್.. ಎಲ್ಲವೂ ಲಭ್ಯ. ಗಿಫ್ಟ್ ಬಾಕ್ಸ್‌ನ ಮೇಲೆ ಒಪ್ಪವಾಗಿ ಕಟ್ಟಿರುವ ಕಟ್ಟಿರುವ ರಿಬ್ಬನ್ ಹೋಲುವ ಹೇರ್‌ಬ್ಯಾಂಡ್ ಕೆಂಪು–ಬಿಳಿ ಬಣ್ಣಗಳಲ್ಲಿ ಆಕರ್ಷಕವಾಗಿ ಕಾಣಿಸುತ್ತದೆ. ಸಾಂತಾಕ್ಲಾಸ್‌ನ ಟೋಪಿ ಹೋಲುವ ಕಿವಿಯೋಲೆಗಳೂ ಫ್ಯಾಷನ್‌ಗೆ ಹೊಸ ಸೇರ್ಪಡೆ. ಪುಟಾಣಿಗಳು 'ಲಿಟಲ್ ಏಂಜಲ್'ನಂತೆ ಕಾಣುತ್ತಾರೆ.

ಹಬ್ಬದ ಮುನ್ನಾ ದಿನ ಪೂಜೆಗಾಗಿ ಚರ್ಚ್‌ಗೆ ಹೋಗುವ ಮಹಿಳೆಯರು, ಮಕ್ಕಳು ಸಾಮಾನ್ಯವಾಗಿ ಸಾಂಪ್ರದಾಯಿಕ ಉಡುಗೆ ತೊಡುಗೆಗಳಿಗೆ ಆದ್ಯತೆ ನೀಡುತ್ತಾರೆ. ಇದರಲ್ಲೂ ಕೆಂಪು ಬಣ್ಣದ ರೇಷ್ಮೆ ಸೀರೆ, ಚೂಡಿದಾರ್ ಧರಿಸುವುದು ವಾಡಿಕೆ. ಪುರುಷರು ನೀಲಿಬಣ್ಣದ ಸೂಟು ತೊಡುತ್ತಾರೆ. ಹಬ್ಬದ ದಿನ ಮಾತ್ರ ವೈವಿಧ್ಯಮಯ ಫ್ಯಾಷನ್ ಉಡುಗೆಗೆ ಆದ್ಯತೆ. ಕ್ರಿಸ್‌ಮಸ್ ಪಾರ್ಟಿಯಂತೂ ಬಹಳ ಕಲರ್‌ಫುಲ್. ಚಳಿಯೊಂದಿಗೆ ಚಿಯರ್ ಆಗಲು ಒಂದಿಷ್ಟು ವೈನು, ಕೇಕ್! ಹಬ್ಬದ ಫ್ಯಾಷನ್‌ಗೆ ಸಾಥಿ ನೀಡಲು ಇವಿಷ್ಟು ಸಾಕು.

## ಕ್ರಿಸ್‌ಮಸ್ ಆಭರಣ

ಸ್ನ್ಯಾಪ್ ಜ್ಯುವೆಲರಿ ಕ್ರಿಸ್‌ಮಸ್ ಹಬ್ಬಕ್ಕಾಗಿಯೇ ರೂಪುಗೊಂಡವು. ಸ್ವರೋಸ್ಕಿ ಕ್ರಿಸ್ಟಲ್‌ನಲ್ಲಿ ತಯಾರಿಸಿದ ಕಿವಿಯೋಲೆಗಳು 18 ಕ್ಯಾರಟ್ ಬಿಳಿ ಚಿನ್ನ ಲೇಪಿತ ಮಾದರಿಯಲ್ಲಿ ಲಭ್ಯ. ಇವು ತ್ವಚೆಗೆ ಸುರಕ್ಷಿತವಾಗಿದ್ದು, ಹಬ್ಬ ಮಾತ್ರವಲ್ಲದೆ ಯಾವುದೇ ಸಮಯದಲ್ಲೂ ಧರಿಸಬಹುದು. ಇವುಗಳನ್ನು ಕ್ರಿಸ್‌ಮಸ್ ಹಬ್ಬದ ನೆಪದಲ್ಲಿ ಪ್ರೀತಿಪಾತ್ರರಿಗೆ ಉಡುಗೊರೆಯಾಗಿಯೂ ನೀಡಬಹುದು.

ಕ್ರಿಸ್‌ಮಸ್ ಸಂಭ್ರಮಕ್ಕಾಗಿಯೇ ಟ್ರೀ ಸ್ಟಡ್ (ಕಿವಿಯೋಲೆ) ಬಂದಿದೆ. ಹಬ್ಬವನ್ನು ಮತ್ತಷ್ಟು ಕಲರ್‌ಫುಲ್ ಆಗಿಸಲು ಇದು ಸಹಕಾರಿ. ಕಿವಿಯೋಲೆ, ಪೆಂಡೆಂಟ್‌ಗಳಲ್ಲಿ ನಕ್ಷತ್ರ, ಚಿಟ್ಟೆ, ಹೂವಿನಾಕಾರದ ವಿನ್ಯಾಸದ ಒಡವೆಗಳೂ ಸಿಗುತ್ತಿವೆ.

## ಕೇಶಶೈಲಿಯಲ್ಲೂ ಕ್ರಿಸ್‌ಮಸ್ ಟ್ರೀ

ಕೃತಕ ಆಭರಣ, ಉಡುಗೆಗಳಲ್ಲಿ ಕ್ರಿಸ್‌ಮಸ್ ಟ್ರೀ ವಿನ್ಯಾಸ ಸಾಮಾನ್ಯ. ಇದೀಗ ಫ್ಯಾಷನ್ ಟ್ರೆಂಡ್ ಸೃಷ್ಟಿಸಲು ಕೇಶಶೈಲಿಯಲ್ಲೀ ಕ್ರಿಸ್‌ಮಸ್ ಟ್ರೀಯನ್ನೇ ಹೋಲುವ ಶೈಲಿ ಟ್ರೆಂಡ್ ಸೃಷ್ಟಿಸುತ್ತಿದೆ. ಉಡುಪು, ಒಡವೆ, ಕೇಶಶೈಲಿಯನ್ನೂ ಮಾಡಿಸಿಕೊಂಡು ಸ್ಟೈಲಾಗಿ ಫೋಟೊ ಕ್ಲಿಕ್ಕಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರದರ್ಶಿಸಿ ಖುಷಿ ಪಡಲು ಲಲನೆಯರು ಭರ್ಜರಿಯಾಗಿಯೇ ಸಿದ್ಧತೆ ನಡೆಸುತ್ತಿದ್ದಾರೆ' ಎಂದು ಹೇಳುತ್ತಾರೆ ಬನ್ನೇರುಘಟ್ಟ ರಸ್ತೆಯಲ್ಲಿರುವ ಬ್ಲಾಸಂ ಬ್ಯೂಟಿ ಪಾರ್ಲರ್ ಒಡತಿ ಸ್ನೇಹಜ್ಯೋತಿ ಮಿನೆಜಸ್.

## ಹೊಸವರ್ಷಕ್ಕೆ ಮುನ್ನುಡಿ

'ಕ್ರಿಸ್‌ಮಸ್ ಹಬ್ಬ ಆಚರಣೆ ಡಿಸೆಂಬರ್ ಕೊನೆಯವಾರ ನಡೆಯುವುದರಿಂದ ಇದು ಹೊಸ ವರ್ಷವನ್ನು ಸ್ವಾಗತಿಸಲು ಮುನ್ನುಡಿಯಂತೆಯೂ ಇರುತ್ತದೆ. ಹೀಗಾಗಿ ಮಹಿಳೆಯರು, ಮಕ್ಕಳು 'ಏಂಜಲ್ ಲುಕ್' ಪಡೆಯುವ ನಿಟ್ಟಿನಲ್ಲಿ ಕೆಂಪು ಬಣ್ಣದ ಗೌನ್, ಲಾಂಗ್ ಗೌನ್ ಧರಿಸಲು ಇಷ್ಟಪಟ್ಟರೆ, ಮಕ್ಕಳು ಸಿಂಡ್ರೆಲಾ ಡ್ರೆಸ್, ಫ್ರಾಕ್ ಧರಿಸಿ ಸಂಭ್ರಮಿಸುತ್ತಾರೆ. ಈ ಉಡುಗೆಗೆ ಒಪ್ಪುವ ಅಂದವಾದ ಹ್ಯಾಂಡ್‌ಬ್ಯಾಂಡ್, ಕ್ರಿಸ್ಟಲ್ ಹ್ಯಾಂಡ್‌ಬ್ಯಾಂಡ್ ಧರಿಸಿದರೆ ಸಖತ್ ಲುಕ್ ಕೊಡುತ್ತದೆ' ಎನ್ನುತ್ತಾರೆ ಸ್ನೇಹಜ್ಯೋತಿ.

